International Journal of Kannada Research
www.kannadajournal.com

ISSN: 2454–5813
IJSR 2015; 1(2): 14-16
© 2015 IJKS
www.kannadajournal.com
Received: 04-07-2015
Accepted: 05-08-2501

**Dr.(Mrs.) Neelambika Policepatil (Sherikar)**
Principal & Research Guide,
Godutai Doddappa Appa Degree College For Women,
S.B.Temple Road, Brahampur,
Kalaburagi, Karnataka-585103.

**Correspondence**
**Dr.(Mrs.) Neelambika Policepatil (Sherikar)**
Principal & Research Guide,
Godutai Doddappa Appa Degree College For Women,
S.B.Temple Road, Brahampur,
Kalaburagi, Karnataka-585103.

# ಮರ್ತ್ಯದ ಮಹಾಮನೆ

**Neelambika Policepatil (Sherikar)**

‘ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು
ಒಳಗೂ ಕಲ್ಯಾಣ ಹೊರಗು ಕಲ್ಯಾಣ
ಇದರಂತುವನಾರು ಬಲ್ಲರಯ್ಯಾ ?
ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯಾ
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತವಕವೆನಗಾಯಿತ್ತು
ಕೇಳಾ ಚನ್ನಮಲ್ಲಿಕಾರ್ಜುನಾ. (೧)

‘ಕಲ್ಯಾಣ’ ‘ಬಸವಕಲ್ಯಾಣ’ – ಈ ಶಬ್ದಗಳು ಕಿವಿಗೆ ಬಿದ್ದ ತಕ್ಷಣ ಮನಸ್ಸು ಮೌನಗೊಂಡು ಅಲ್ಲಿ ಭಕ್ತಿ ಪುಟದೇಳುತ್ತದೆ. ಆ ಭಕ್ತಿಯ ಶಕ್ತಿಯಾದ ಬಸವಾದಿ ಪ್ರಮಥರ ನೆನಪಿನೊಂದಿಗೆ ತಲೆ ತನ್ನಷ್ಟಕ್ಕೆ ತಾನೇ ಬಾಗುತ್ತದೆ.

ಸುತ್ತೂರು, ಎಡೆಯೂರು, ಕಲಬುರ್ಗಿ ಜೇವರ್ಗಿ ಹೀಗೆ ಅನೇಕ ಊರುಗಳು ಒಬ್ಬೊಬ್ಬ ಶರಣರಿಂದಾಗಿ ಪರಮಪಾವನ ಕ್ಷೇತ್ರಗಳಾಗಿ ಪ್ರಸಿದ್ಧಗೊಂಡಿವೆ. ಆದರೆ ಕಲ್ಯಾಣದ ಸಂದರ್ಭದಲ್ಲಿ ಹಾಗಲ್ಲ. ಒಬ್ಬರಲ್ಲ ನೂರಲ್ಲ ಸಾವಿರಲ್ಲ, ಲಕ್ಷ ಲಕ್ಷ ಶರಣರು ಒಂದಡೆ ಕೂತು ಕಾಯಕ, ಅರ್ಚನೆ, ಅರ್ಪಣೆ ಅನುಭಾವ – ನಡೆಸಿ ಕಲ್ಯಾಣದ ಕಣಕಣವನ್ನು ಪವಿತ್ರಗೊಳಿಸಿದರು. ಅಂತೆಯೇ ಆಪುರ ಕೈಲಾಸ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ಕೇವಲ ನುಡಿಯಲ್ಲ, ಆಡುವವರ ಮನದಾಳದ ನುಡಿಯಿದು. ಅದನ್ನು ಕಂಡು ಅನುಭವಿಸಿ ಆನಂದಪಟ್ಟುವರು ಆಡಿದ ಮಾತಿದು.

ಕಲ್ಯಾಣ, ಬಸವಕಲ್ಯಾಣ – ಕರ್ನಾಟಕ ರಾಜ್ಯದ ಉತ್ತರದ ತುತ್ತ ತುದಿಯಲ್ಲಿ ಬರುವ ಬೀದರ ಜಿಲ್ಲೆಯ ಐದು ತಾಲೂಕಾಗಳಲ್ಲಿ ಒಂದು. ಇಂದು ಇದೊಂದು ಚಿಕ್ಕ ತಾಲೂಕಾವಾಗಿರಬಹುದು. ಆದರೆ ಇತಿಹಾಸ ಹೊತ್ತು ನಿಂತ ಸಾಕ್ಷಿಗಳ ಆಧಾರದಿಂದ ಸಾವಿರ ವರ್ಷಗಳಿಗಿಂತ ಹೆಚ್ಚಿನ ಇತಿಹಾಸ ಈ ನಾಡಿಗಿದೆ.

ಒಂದು ಕಾಲಕ್ಕೆ ಇದು ಮಹಾಪ್ರತಾಪಿಗಳಿಗೆ ರಾಜಧಾನಿ ಎನಿಸಿದರೆ, ಶರಣರಿಗೆ ಯೋಗ ಭೂಮಿಯಾಯಿತು. ಕಲೆ, ಸಾಹಿತ್ಯಕ್ಕೆ ಆಶ್ರಯಕೊಟ್ಟು ಸಂಸ್ಕೃತಿಯ ತಾಯಿ ಎನಿಸಿತು. ಹೀಗೆ ಉಚ್ಚ ಸಾಂಸ್ಕೃತಿಕ ಪರಂಪರೆಯನ್ನು ತನ್ನ ಗರ್ಭದೊಳಗಿಸಿಕೊಂಡು ಭೌತಿಕ ಉನ್ನತಿಯನ್ನು ಸಾಧಿಸಿತು. ವಿಜ್ಞಾನೇಶ್ವರ ಕವಿ ತನ್ನ ಕೃತಿ – ‘ಮಿತಾಕ್ಷರ’ ದಲ್ಲಿ ಈ ಪುರದ ವೈಶಿಷ್ಟ್ಯವನ್ನು ಹೀಗೆ ವರ್ಣಿಸುತ್ತಾನೆ.
“ನಾಸ್ತೀದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣ ಕಲ್ಪಪುರಂ ।

ಚಾಲುಕ್ಯರ ಕಲ್ಯಾಣದ ವೈಭವಕ್ಕೆ ಮುಂದೆ ಬಂದ ಕಳಚುರಿ ಅರಸರ ಕಾಲವು ಬಂಗಾರಕ್ಕೆ ಕುಂದಣವಿಟ್ಟಂತಾಯಿತು. ಅದಕ್ಕೆ ಮುಖ್ಯವಾದ ಕಾರಣವೆಂದರೆ ಕಳಚುರಿಯರ ಕಾಲದಲ್ಲಿ ಬಸವಾದಿ ಶಿವಶರಣರು ಕಲ್ಯಾಣದಲ್ಲಿ ಕೂಡಿದ್ದು, ಕಲ್ಯಾಣಪುರವನ್ನು ಬಸವಾದಿ ಶರಣರು ತಮ್ಮ ಕಾಯಕದ ನೆಲೆಯನ್ನಾಗಿ ಆರಿಸಿಕೊಂಡು ತಮ್ಮ ಆತ್ಮಕಲ್ಯಾಣದ ಜೊತೆಗೆ ಲೋಕಕಲ್ಯಾಣಗೈದದ್ದು
ಮುಖ್ಯವಾಗಿದೆ. ಶರಣರ ಕಾಲದ ಕಲ್ಯಾಣವು ಅನ್ವರ್ಥಕ ಎನಿಸಿ ಇಡೀ ಮಾನವ ಕುಲದ ಕಲ್ಯಾಣದ ಕೇಂದ್ರವಾಗಿತ್ತು.

ಆ ಸಮಯದ ಕಲ್ಯಾಣವು ಕರ್ತಾರನ ಕಮ್ಮಟವಾಯಿತು; ಧರ್ಮದ ಬೀಡಾಯಿತು. ಅರಿವು ಆಚಾರಗಳ ಸಮತೋಲನವನ್ನು ಕಾಯ್ದಿರಿಸುವ, ಇಹಲೋಕಕ್ಕೆ ಸಮನ್ವಯ ತತ್ತ್ವವನ್ನಿತ್ತು ಮರ್ತ್ಯಲೋಕವನ್ನು ದೇವಲೋಕವನ್ನಾಗಿಸಿತು. ಆ ಪುಣ್ಯದ ನೆಲದಲ್ಲಿ ಮೂರ್ತರೂಪ ತಾಳಿದ ಅನುಭವ ಮಂಟಪದಲ್ಲಿ ಕುಳಿತು ತಮ್ಮ ಮನದಾಳದ ಮಾತನ್ನು ಒಬ್ಬರಿಗೊಬ್ಬರು ಆಡಿಕೊಂಡರು, ಆಡಿದ್ದನ್ನು ಬರೆದುಕೊಂಡರು. ಆಧುನಿಕ ತತ್ತ್ವಜ್ಞಾನಿಗಳಾಗಿದ್ದ ರುಸೋ, ಟಾಲಸ್ಟಾಯ್, ಮಾರ್ಕ್ಸ್, ಲೆನಿನ್ – ಮುಂತಾದವರ ವಿಚಾರ ತತ್ತ್ವಗಳನ್ನೆಲ್ಲಾ ಅಂದಿನ ಕಲ್ಯಾಣದಲ್ಲಿ ಶರಣರು ಚರ್ಚೆಗೈದಿದ್ದರು. ಕೇವಲ ಚರ್ಚೆಗೈದಿಲ್ಲ ಆಡಿದ್ದನ್ನು ಮಾಡಿ ತೋರಿಸಿದರು.

ಬಸವಣ್ಣನವರಿಂದ ಕಲ್ಯಾಣವು ಪಾವನಗೊಂಡರೆ, ಕಲ್ಯಾಣವು ಬಸವಣ್ಣನವರಿಗೆ ಅಷ್ಟೇ ಪ್ರಿಯವಾಗಿತ್ತು. ಶರಣರನ್ನು ಅವರು ಎಷ್ಟು ಪ್ರೀತಿಸುತ್ತಿದ್ದರೊ, ಗೌರವಿಸುತ್ತಿದ್ದರೂ ಕಲ್ಯಾಣವನ್ನು ಅದೇ

ಭಾವನೆಯಿಂದ ಕಂಡರು. ಆ ಪುರವು ಅವರಿಗೆ ಮಹಾಸ್ಥಾನವಾಗಿ ತೋರಿತ್ತಲ್ಲದೆ, ಅವರ ವ್ಯಕ್ತಿತ್ವದಿಂದ ಆಕರ್ಷತರಾಗಿ ಕಲ್ಯಾಣದತ್ತ ಹರಿದು ಬಂದ ಶರಣರಿಗೂ ಅದು ಯೋಗಭೂಮಿಯಾಯಿತು. ಹರಿಹರನು ತನ್ನ ಕೃತಿ 'ಬಸವರಾಜ ದೇವರ ರಗಳೆ'ಯಲ್ಲಿ ಅಂದು ಕಲ್ಯಾಣಕ್ಕೆ ಬಂದ ಶರಣರ ಪಟ್ಟಿಯನ್ನು ಕೊಡುತ್ತಾರೆ.

"ಈ ಬಂದುದಿದೆ ಚೋಳ ದೇಶದ ಮಹಾಗಣಂ
ಆ ಬಂದುದೆ ಪಾಂಡ್ಯ ಕೇರಳ ದಿಶಾನಗಣಂ
ಇದು ಗೌಳದೇಶದ ಗಣಾವಳಿಯ ಸಂಭ್ರಮಂ
ಆದು ಮಾಳವ ದೇಶದ ಮಹಾಗಣ ಕುಲದ ವಿಭ್ರಮಂ
ಇದುವಂಗ ಬಂಗಾಳ ಲಾಳ ದೇಶದ ಗಣಂ
ಇದು ಕಳಿಂಗ ಮಹಾರಾಷ್ಟ್ರ ದೇಶದ ಗಣಂ
ಇದು ತುಳುವು ಮಲೆಯಾಳ ದೇಶ ಗಣದೊತ್ತತ್ತಿ
ಇದು ತೆಲುಗು ತೆಗುಳ ಬರ್ಬರ ಗಣಹ ಸಂಪತ್ತಿ
ಇತ್ತಲಿದೆ ಸಿಂಗಣ ದ್ವೀಪದ ಗಣವ್ರಾತ
ಇತ್ತಲಿದೆ ಕಾಶ್ಮೀರ ದೇಶದ ಶರಣವ್ರಾತ" (೩)

ಹೀಗೆ ಅಖಂಡ ಭಾರತದೇಶದಿಂದಲೂ, ಮತ್ತು ಭಾರತದ ಹೊರನಾಡಿನಿಂದಲೂ ಜನರು ಕಲ್ಯಾಣಕ್ಕೆ ಧಾವಿಸಿ ಬಂದರು. ಅದೊಂದು ಮಹಾಯಾತ್ರೆ. ಆ ಯಾತ್ರೆಯಲ್ಲಿ ಸಾವಿರಾರು ಅಲ್ಲ, ಲಕ್ಷ ಲಕ್ಷ ಜನರು ದೂರ ದೂರದೆಡೆಗಳಿಂದ ಬಂದರು. ಇವರಲ್ಲಿ ಕೆಲವರು ಆತ್ಮೋದ್ಧಾರದ ಹಂಬಲದಿಂದ, ಕೆಲವರು ಕುತೂಹಲದಿಂದ, ಕೆಲವರು ಕಲ್ಯಾಣ ಪಟ್ಟಣ ಮತ್ತು ಅದರ ಆರಾಧ್ಯ ದೇವರೆನಿಸಿದ ಬಸವೇಶ್ವರರ ದರ್ಶನಕ್ಕೆ, ಒಟ್ಟಾರೆ ಮುಕ್ತಿ ಪಥವನ್ನು ಪಡೆಯುವದಕ್ಕೆ ಕಲ್ಯಾಣ ಪಟ್ಟಣವನ್ನು ಅರಸುತ್ತಾ ಬಂದರು. ಹಾಗೇ ಬಂದವರಿಗೆ ನಿಜಾರ್ಥದಲ್ಲಿ ಆ ಪುರವು ಕಲ್ಯಾಣವನ್ನುಂಟುಮಾಡಿತು. ಆ ಹಂಬಲದವರಿಗೆ ಕಲ್ಯಾಣ ಆತ್ಮ ಕಲ್ಯಾಣ, ಸಮಾಜ ಕಲ್ಯಾಣ, ವಿಶ್ವ ಕಲ್ಯಾಣವನ್ನುಂಟು ಮಾಡುವ ಕೇಂದ್ರವಾಯಿತು. ಹೀಗೆ ಶಕ್ತಿ ಸಾಮ್ರಾಜ್ಯದೊಂದಿಗೆ ಭಕ್ತಿ ಸಾಮ್ರಾಜ್ಯದ ರಾಜ್ಯವಾದ ಕಲ್ಯಾಣದಲ್ಲಿ ಅಂದು ಕಂಡು ಬಂದಿದ್ದೇನು ?

'ಎತ್ತೆತ್ತ ನೋಡಿದಡತ್ತತ್ತ ಬಸವನೆಂಬ ಬಳ್ಳಿ
ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು
ಒತ್ತಿ ಹಿಂಡಿದರೆ ಭಕ್ತಿ ಎಂಬ ರಸವಯ್ಯ" (೪)

ಎಂತಹ ಅದ್ಭುತ ದೃಶ್ಯ ! ಎಲ್ಲಿಯೂ ಕಾಣದ ಸನ್ನಿವೇಶ, ಕೇಳದ ವಿಷಯ; ಭಕ್ತಿಯ ಮಹಾಪೂರವೇ ಹರಿದು ಬಂದಿದೆ ಕಲ್ಯಾಣಕ್ಕೆ ಬಂದವರು ಆ ಭಕ್ತಿ ರಸದಲ್ಲಿ ಮಿಂದು ತಮಗಂಟಿದ ಕರ್ಮಗಳನ್ನೆಲ್ಲಾ ಅದರೊಳು ತೊಳೆದು ಪರಿಶುದ್ಧರಾಗಿ ಹೊಸ ಹುಟ್ಟು ಪಡೆದರು. ಗುರು-ಲಿಂಗ-ಜಂಗಮರನ್ನು ಪೂಜಿಸಿ ತಾವೇ ಅವರಾದರು. ಆದ್ದರಿಂದ ಕಲ್ಯಾಣ ಪಟ್ಟಣವು ಅಸಂಖ್ಯಾತ ಗುರುವೃಂದವನ್ನು ಹೊಂದಿ ಗುರುಮನೆಯಾಯಿತು; ಪ್ರತಿಯೊಬ್ಬರು ಲಿಂಗವನ್ನು ಎದೆ ಮೇಲೆ ಧರಿಸಿರುವದರಿಂದ ಲಿಂಗದಾಲಯವಾಯಿತು. ಜಂಗಮಶ್ರೇಷ್ಠತೆ ಹೆಜ್ಜೆ ಹೆಜ್ಜೆಗೆ ಕಂಡು ಬಂದಿರುವದರಿಂದ ಜಂಗಮ ಮಠವಾಯಿತು. ಶರಣ ಮಡಿವಾಳ ಮಾಚಿದೇವರ ವಚನವು ಈ ಮಾತಿಗೆ ಹೆಚ್ಚು ಪುಷ್ಠಿಯನ್ನು ಕೊಡುತ್ತಿದೆ.

'ಹೊಗಬಾರದು ಕಲ್ಯಾಣವನ್ನಾರಿಗೆಯೂ
ಹೊಕ್ಕಡೇನು ? ಕಲ್ಯಾಣದ ಸ್ಥಾನ ಮಾನಂಗಳ ನುಡಿಯಬಾರದು
ಆ ಕಲ್ಯಾಣ ಕಡೆಯ ಕಾಣಬಾರದು
ಕಲ್ಯಾಣದೊಳಗೆ ಹೊಕ್ಕೆಹೆವೆಂದು ಕಲ್ಯಾಣ ಚರಿತ್ರರಾದೆವೆಂದು
ದೇವ ದಾನವ ಮಾನವರೆಲ್ಲರೂ ಭಾವಿಸುತ್ತಿರ್ದರು
ನೋಡಾ ಕಲ್ಯಾಣವನು
ಅನಂತಮೂರ್ತಿಗಳು ಅನಂತ ಸ್ಥೂಲ ಮೂರ್ತಿಗಳು
ಅನಂತ ಸೂಕ್ಷ್ಮ ಮೂರ್ತಿಗಳು ಅನಂತ ಮಂತ್ರ ಧ್ಯಾನ ರೂಪರು
ಪುಣ್ಯಕ್ಕೆ ಅಭಿಲಾಷೆಯ ಮಾಡುವವರು ಪೂಜಕರು ಯೋಗಿಗಳು
ಭೋಗಿಗಳು ದ್ವೈತರು ಅದ್ವೈತರು ಯೋಗಿಗಳು ನಿಷ್ಕಾಮಿಗಳು
ಆಶ್ರಿತರು
ಅದೆಂತು ಹೊಗಬಹುದಯ್ಯಾ ಕಲ್ಯಾಣವನು
ಅದೆಂತು ಕಾಣಬಹುದಯ್ಯಾ ಕಲ್ಯಾಣವನು
ಲಿಂಗದೃಷ್ಟಂಗಲ್ಲದೆ ಲಿಂಗವೇದ್ಯಗಲ್ಲದೆ
ಲಿಂಗ ಗಂಭೀರಂಗಲ್ಲದೆ ಪ್ರಸಾದ ಕುಳಾನ್ವಯಂಗಲ್ಲದೆ
ಆಸೆಗೆಡಗುಡದಿಪ್ಪುದೆ ಕಲ್ಯಾಣ
ಸರ್ವಾಂಗ ವರ್ಣವಳಿದು ಕುಲಮದ ತಲೆದೋರದೆ
ಭಕ್ತಿ ನಿತ್ಯವಾದುದೆ ಕಲ್ಯಾಣ
ಆ ಕಲ್ಯಾಣವೆಂಬ ಮಹಾಪುರದೊಳಗೆ
ಬಸವಣ್ಣನು ನಾನು ಕೂಡಿ ಹದುಳಿರ್ದೆವು
ಕಾಣಾ ಕಲಿದೇವಯ್ಯ (೫)

ಈ ವಚನವು ೧೨ನೆಯ ಶತಮಾನದ ಕಲ್ಯಾಣ ಪಟ್ಟಣದ ಭಕ್ತಿ ಭಾಗ್ಯದ ವೈಭವವನ್ನು, ಸಿರಿಶೃಂಗಾರಗಳನ್ನು, ಸಾಂಸ್ಕೃತಿಕ ಹಿರಿಮೆಗಳನ್ನು ದರ್ಶನ ಮಾಡಿಸುತ್ತದೆ.

ಅಲ್ಲಿ ನೆಲಸಿದ್ದ ನಿಷ್ಠಾವಂತ ಶಿವಶರಣರು ತಮ್ಮ ಪರಿಶುದ್ಧ ಮನಸ್ಸಿನಿಂದ ಕಾಯಕ ದಾಸೋಹ ಮಾಡುತ್ತಾ, ಯಾವೊಂದು ಫಲಾಪೇಕ್ಷೆಯಿಲ್ಲದೆ ಬಾಳ ಬೆಳಗಿದ ಶಿವಾನುಭವಿಗಳು.

ಈ ಶಿವಾನುಭವಿಗಳಿಗೆ ಜಾತಿ, ಮತ, ಪಂಥ, ಲಿಂಗ – ಯಾವುದರ ಬಂಧನವಿರಲಿಲ್ಲ. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುತ್ತಾ, ಸಕಲ ಪ್ರಾಣಿಗಳಲ್ಲಿಯೂ ದಯೆಯನ್ನು ತೋರಿಸುತ್ತಾ ಸತ್ಯಶೀಲವನ್ನು ಪ್ರತಿಪಾದಿಸುತ್ತಾ, ಬದುಕಿದವರು. ಇವರ ನಡೆ ತೀರ್ಥ; ಇವರ ನುಡಿ ತೀರ್ಥ! ಇಂತಹ ತೀರ್ಥದಿಂದ ಕಲ್ಯಾಣವು ಧನ್ಯವಾಯಿತು.

ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ ಸಿದ್ಧರಾಮೇಶ್ವರ, ಅಕ್ಕನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಅಕ್ಕಮಹಾದೇವಿ ಇವರೊಂದಿಗೆ ಮಾದರ ಚನ್ನಯ್ಯ ದೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ನೂಲಿಯ ಚಂದಯ್ಯ, ಅಂಬಿಗರ ಚೌಡಯ್ಯ, ಘಟ್ಟವಾಳಯ್ಯ ಕಿನ್ನರಿ ಬೊಮ್ಮಣ್ಣ, ಮುಗ್ಧ ಸಂಗಣ್ಣ, ದಸರಯ್ಯ ಘಟ್ಟಿವಾಳಯ್ಯ ದನಗಾಹಿ ರಾಮಣ್ಣ ಮೇದಾರ ಕೇತಯ್ಯ, ಮಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ, ಬಹುರೂಪಿ ಚೌಡಯ್ಯ, ಮುಕ್ತಾಯಕ್ಕ, ಕಾಳವ್ವೆ, ಬೊಂತಾದೇವಿ, ಆಯ್ದಕ್ಕಿ ಲಕ್ಕಮ್ಮ, ಕಾಳವ್ವೆ, ಬೊಂತಾದೇವಿ, ಅಮುಗೆ ರಾಯಮ್ಮ ಮೋಳಿಗೆ ಮಹಾದೇವಿ, ಅಕ್ಕಮ್ಮ, ಸತ್ಯಕ್ಕ, ಮಸಣಮ್ಮ, ಸೋಮಮ್ಮ ಲಕ್ಷ್ಮಮ್ಮ, ಗೊಗ್ಗವ್ವೆ, ವೀರಮ್ಮ, ರೇಕಮ್ಮ, ಸಂಕವ್ವೆ, ಗಂಗಮ್ಮ – ಇಂತಹ ಅಸಂಖ್ಯಾತ ಶರಣ ಶರಣಿಯರಿಗೆ ಕಲ್ಯಾಣವು ಆತ್ಮೋದ್ಧಾರದ ಮೆಟ್ಟಲನ್ನು ಹತ್ತುವದಕ್ಕೆ ನಿಚ್ಚಣಿಕೆಯಾಯಿತು. ಅದನ್ನು ಹತ್ತಿದ ಅಸಂಖ್ಯಾತರ ಅಂಗ ಲಿಂಗವಾಯಿತು, ಮಹಾಲಿಂಗವಾಯಿತು.

ಹೀಗೆ ಜಗತ್ತಿನಲ್ಲಿ ಮೊಟ್ಟ ಮೊದಲ ಬಾರಿಗೆ ಸ್ತ್ರೀಯರಿಗೆ, ಅಸ್ಪ್ರಶ್ಯರಿಗೆ, ಅನಾಥರಿಗೆ, – ಆಧ್ಯಾತ್ಮದ ಕ್ಷಿತಿಜವನ್ನು ಕಾಣಲು ಸಾಧ್ಯವಾಯಿತು. ಕಲ್ಯಾಣದಲ್ಲಿ ಅಲ್ಲಿಯವರೆಗೆ ಕೆಲವೊಬ್ಬರ ಹಸ್ತದಲ್ಲಿ ಕಪಿ ಮುಷ್ಠಿಯಲ್ಲಿದ್ದ ದೇವರು, ಧರ್ಮ ತತ್ತ್ವ, ಭಾಷೆ, ಸಾಹಿತ್ಯ – ಎಲ್ಲವೂ ಕಲ್ಯಾಣದ ನೆಲದಲ್ಲಿ ಬಿಡುಗಡೆಗೊಂಡವು ಅವು, ಸಾಧಕರ ಕೈಗೆ ಬಂದವು. ಪಂಡಿತರಿಂದ ಹಿಡಿದು ಪಾಮರರವರೆಗೂ ಕಠಿಣತೆಯನ್ನು ತೊಡೆದು ಸರಳವಾಗಿ, ಎಲ್ಲರಿಗೂ ತಿಳಿಯುವಂತೆ ಮಾತನಾಡಿದರು.

ಶರಣರು ನುಡಿದು ನಡೆದು ಬರೆದ ವಚನ ಸಾಹಿತ್ಯ ಇಡೀ ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. 'ವಿಶ್ವಸಾಹಿತ್ಯಕ್ಕೆ ಕನ್ನಡಿಗರು ಕೊಟ್ಟ ಕಾಣಿಕೆ ವಚನ ಸಾಹಿತ್ಯ' – ಎಂಬ ಶಿ.ಶಿ.ಬಸವನಾಳರ ಮಾತು ಅದರ ಮಹತ್ತ್ವವನ್ನು ಎತ್ತಿ

ತೋರಿಸುತ್ತದೆ. ಕಲ್ಯಾಣವು ಈ ವಿಪುಲ ವಚನಸಾಹಿತ್ಯಕ್ಕೆ ಕಲ್ಯಾಣವು ತವರೆನಿಸಿತು. ಕೇವಲ ಅನುಭವ ಮಂಟಪದ ನಾಲ್ಕು ಗೋಡೆಗಳ ಮಧ್ಯೆ ಉಳಿಯದೆ ಮನೆ ಮನೆಗಳಿಗೂ, ಮನ ಮನಗಳಿಗೂ ಈ ವಚನಗಳ ಸಂದೇಶ ಮುಟ್ಟಿತು. ಅಲ್ಲಿಯವರೆಗೆ ನೊಂದ ಬೆಂದ ಮನಗಳು ಜಾಗೃತಗೊಂಡವು, ಎದ್ದುನಿಂತು ಕಲ್ಯಾಣದತ್ತ ಹೊರಟವು. ಹೀಗಾಗಿ ಕಲ್ಯಾಣವು ಅಸಂಖ್ಯಾತ ವಚನಕಾರರ ಕೂಟವಾಯಿತು. ಇಂತಹ ಗುಣ ವೈಶಿಷ್ಟ್ಯಗಳನ್ನು ಹೊಂದಿದ ಕಲ್ಯಾಣದ ಮಹಾತ್ಮೆಯನ್ನು ಅರಿತೆ ಗುಮ್ಮಳಾಪುರದ\ಸಿದ್ಧಲಿಂಗ ದೇವರು ತಮ್ಮ ಶೂನ್ಯಸಂಪಾದನೆಯಲ್ಲಿ ಕಲ್ಯಾಣವನ್ನು ಹೀಗೆ ವರ್ಣಿಸುತ್ತಾರೆ.

“ಮರ್ತ್ಯಲೋಕದ ಸಕಲೈಶ್ವರ್ಯದ ಭಂಡಾರದ ನಿಜನಿಳಯವೆನಿಪ್ಪ ಮತ್ತು ಭೂಮಿಗೆ ಹೃತ್ಕಮಲದ ಕರ್ಣಿಕಾವಾಸ ಮೆನಲೊಪ್ಪುವ ವಾಣಿಯ ಮುಖದರ್ಪಣವೆನಿಸಿದ ಸಕಲಧರ್ಮಂಗಳಂ ತೀವಿದ ಕರಡಂಗೆ ಎನಿಸಿದ ಸತ್ಯದ ಸಾಗರ ಎನಿಸಿಪ್ಪ ಶ್ರೀಕಲ್ಯಾಣಪುರಂ”.

ಹೀಗೆ ಧರ್ಮದ ನೆಲೆಯಾಗಿ, ಕಲೆಯ ತಾಣವಾಗಿ, ಸಾಹಿತ್ಯದ ತವರುಮನೆಯಾಗಿ, ಅರಸರ ರಾಜಧಾನಿಯಾಗಿ, ಶರಣರ ಯೋಗ ಭೂಮಿಯಾಗಿ, ಮೆರೆದಿರುವ ಕಲ್ಯಾಣ ಪಟ್ಟಣವು ಕರ್ನಾಟಕದಲ್ಲಿ ಮಾತ್ರವಲ್ಲ ಭಾರತದಲ್ಲಿಯೇ ಅಪರೂಪದ ಪಟ್ಟಣವಾಗಿದೆ. ಕಲ್ಯಾಣದ ಇತಿಹಾಸವೇ ಕರ್ನಾಟಕದ ಇತಿಹಾಸವಾಗಿದೆ.

**ಅಡಿ ಟಿಪ್ಪಣಿಗಳು: ಖಜಾಜಿಜಾಶಿಜಾಟಿಛಿಜ**

೧. ಶಿವಶರಣೆಯರ ವಚನ ಸಂಪುಟ ಸಂ. – ಡಾ. ವೀರಣ್ಣ ರಾಜೂರು ಪು. ೪೦ ವಚನ ೧೨೨
೨. ವಿಜ್ಞಾನೆಶ್ವರನ ಮಿತಾಕ್ಷರ–ಭಾವನೇಶ್ವರಿ ಆಶ್ರಮ ಅಲಹಾಬಾದ ೧೯೧೩ ವ್ಹಿ. ೩ ಪುಟ ೪೯೪
೩. ಹರಿಹರನ ರಗಳೆಗಳು ಸಂ. – ಡಾ. ಎಂ.ಎಂ. ಕಲಬುರ್ಗಿ
೪. ಸಂಕೀರ್ಣ ವಚನ ಸಂಪುಟ–೩ ಸಂ. – ಡಾ. ಬಿ. ಆರ್. ಹಿರೇಮಠ ಪುಟ ೨೦೧
೫. ಸಂಕೀರ್ಣ ವಚನ ಸಂ. ೫ ಸಂ. – ಡಾ. ಬಿ. ಆರ್. ಹಿರೇಮಠ ಪುಟ ೨೯೯ ವಚನ ೭೮೮
೬. ಗುಮ್ಮಳಾಪುರದ ಸಿದ್ಧಲಿಂಗರ ಶೂನ್ಯಸಂಪಾದನೆ